# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಮಂಗಳವಾರ, ೧೭, ಮಾರ್ಚ್, ೨೦೨೬(ಫಾಲ್ಗುಣ, ೨೬, ಶಕವರ್ಷ, ೧೯೪೭)<br>BENGALURU, TUESDAY, 17, MARCH, 2026(PHALGUNA, 26, SHAKAVARSHA, 1947) | ನಂ. ೨೧೬<br>No. 216 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 205 ಸೇನೆನಿ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:17.03.2026

## ಸುತ್ತೋಲೆ

**ವಿಷಯ**: ಸಂವಿಧಾನದ ಅನುಚ್ಛೇದ 16(4) ಮತ್ತು 16(4A) ರನ್ವಯ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿದ ನಿಯಮ, ಆದೇಶ ಮತ್ತು ಇತರ ಸೂಚನೆಗಳನ್ನು ಸ್ವಾಯತ್ತ ಸಂಸ್ಥೆಗಳಾದ ನಿಗಮ, ಮಂಡಳಿ, ಕಂಪನಿ, ಸ್ಥಳೀಯ ಸಂಸ್ಥೆ, ಶಾಸನಬದ್ಧ ಸಂಸ್ಥೆ, ವಿಶ್ವವಿದ್ಯಾಲಯ, ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆ ಇತ್ಯಾದಿಗಳು ಪಾಲಿಸುವ / ಅಳವಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:** 1. ದಿನಾಂಕ 08.03.1991ರ ಸುತ್ತೋಲೆ ಸಂಖ್ಯೆ: ಸಿಆಸುಇ 09 ಸೇಸೇನಿ 91.
2. ದಿನಾಂಕ 30.03.1998 ರ ಸುತ್ತೋಲೆ ಸಂಖ್ಯೆ: ಸಿಆಸುಇ 05 ಸೇಹಿಮ 98.
3. ದಿನಾಂಕ 28.06.2021ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 19 ಸೇಇವಿ 2021

~*~*~*~

1. ಉಲ್ಲೇಖ (1) ರ ದಿನಾಂಕ: 08.03.1991 ರ ಸುತ್ತೋಲೆಯನ್ನು ದಿನಾಂಕ 02.03.1979 ರ ಸುತ್ತೋಲೆ ಸಂಖ್ಯೆ ಡಿಪಿಎಆರ್ 18 ಎಸ್ ಎಸ್ ಆರ್ 79 ಯೊಂದಿಗೆ ಸಹವಾಚನ ಮಾಡಿಕೊಂಡಂತೆ, ಇವುಗಳನ್ವಯ, ಇತರ ಅಂಶಗಳೊಂದಿಗೆ, ಈ ಕೆಳಗೆ ಉದ್ಧರಿಸಿದಂತೆ ಸೂಚನೆಗಳನ್ನು ನೀಡಲಾಗಿರುತ್ತದೆ:

"(ಅ) ಸ್ವಾಯತ್ತ ಸಂಸ್ಥೆಗಳು: ಮಂಡಳಿಗಳು: ನಿಗಮಗಳು ಇತ್ಯಾದಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಿಬ್ಬಂದಿ ಮತ್ತು

ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ವಿಭಾಗವು ಹೊರಡಿಸಿದ ನಿಯಮಗಳು: ಆದೇಶಗಳು ನೇರವಾಗಿ ಅನ್ವಯವಾಗದ ಪ್ರಕರಣಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)ಯ ಅಭಿಪ್ರಾಯವನ್ನು ಕೋರುವ ಅವಶ್ಯಕತೆ ಇರುವುದಿಲ್ಲ."

2. ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 ರ ಸೆಕ್ಷನ್ 2 ರ ಉಪ ಸೆಕ್ಷನ್ (3) ರಲ್ಲಿ "establishments in public sector" ಎಂಬುದನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ:

"(3) establishments in public sector" means, (i) a co-operative society registered or deemed to have been registered under the Karnataka Co-operative Societies Act, 1959;

(ii) an educational institution established or maintained or aided by the State -Government;

(iii) a Government company within the meaning of section 617 of the Companies Act, 1956;

(iv) a local authority;

(v) a statutory body or Corporation established, by or under a State or Central Act owned or controlled by the State Government;

(vi) a university established or deemed to have been established by or under any law of the State Legislature".

1990 ರ ಸದರಿ ಅಧಿನಿಯಮದ ಸೆಕ್ಷನ್ 4 ರ ಉಪ ಸೆಕ್ಷನ್ (1) ಮತ್ತು (2) ನ್ನು ಈ ಕೆಳಗೆ ಉದ್ಧರಿಸಿದೆ:-

"**4. Reservation of appointments or posts etc.-** (1) After the appointed day, while making appointments to any office in a Civil Service of the State of Karnataka or to a Civil post under the State of Karnataka, appointments or posts shall be reserve for the members of the Scheduled Castes, Scheduled Tribes and Other Backward Classes to such extent and in such manner as may be specified from time to time in the order made by the

Government under clause (4) of article 16 of the Constitution of India.

(1A) xxxxx

(2) The provisions of the said order made under clause (4) of Article 16 of the Constitution shall be deemed to be an order made under this Act and shall mutatis mutandis apply to a service or post in an establishment in public sector".

3. 1990 ರ ಸದರಿ ಅಧಿನಿಯಮದ, ಮೇಲೆ ಉದ್ಧರಿಸಲಾದ ಸೆಕ್ಷನ್ 2 ರ ಉಪ ಸೆಕ್ಷನ್ (3) ರಲ್ಲಿ "establishments in public sector" ಎಂಬುದನ್ನು ಪರಿಭಾಷಿಸಲಾಗಿದ್ದು, ಅದರಲ್ಲಿ ನಮೂದಿಸಲಾದ ಸ್ವಾಯತ್ತ ಸಂಸ್ಥೆಗಳಿಗೆ ಮೀಸಲಾತಿಗೆ ಸಂಬಂಧಿಸಿದಂತೆ ಸಂವಿಧಾನದ ಅನುಚ್ಛೇದ 16 (4) ಮತ್ತು 16 (4A) ರನ್ವಯ ಸರ್ಕಾರ ಹೊರಡಿಸಿದ ಆದೇಶಗಳು ಅನ್ವಯವಾಗುತ್ತವೆ ಎನ್ನುವ ವಾಸ್ತವಾಂಶವನ್ನು ಉಲ್ಲೇಖ (2) ರ ದಿನಾಂಕ 30.03.1998 ರ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

4. ಉಲ್ಲೇಖ (3) ರ ದಿನಾಂಕ 28.06.2021 ರ ಅಧಿಕೃತ ಜ್ಞಾಪನದಲ್ಲಿ ಈ ಕೆಳಗೆ ಉದ್ಧರಿಸಿದಂತೆ ಸೂಚಿಸಲಾಗಿರುತ್ತದೆ:

"4 ಆದಕಾರಣ, ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಸರ್ಕಾರ ರಚಿಸಿರುವ ಸೇವಾ ನಿಯಮಗಳನ್ನು "ಯಥೋಚಿತ ಬದಲಾವಣೆಗಳೊಂದಿಗೆ (mutatis-mutandis)" ಅಳವಡಿಸಿಕೊಳ್ಳಲು ಆಸ್ಪದಗಳನ್ನು ಕಲ್ಪಿಸುವ ವಾಡಿಕೆಯನ್ನು ಇಂತಹ ಸಂಸ್ಥೆಗಳು ಕೈಬಿಡಬೇಕೆಂದು ಹಾಗೂ ಅವುಗಳ ನೌಕರರಿಗೆ ಸಂಬಂಧಿಸಿದಂತೆ ತಮ್ಮದೇ ಆದ ಪ್ರತ್ಯೇಕ ಹಾಗೂ ಸ್ವಯಂ-ಅಡಕಗೊಂಡ (self-contained) ಸೇವಾ ನಿಯಮಗಳನ್ನು ರಾಜ್ಯ ಸರ್ಕಾರದ ಕಾರ್ಯನೀತಿಗೆ ಅನುಗುಣವಾಗಿ ರಚಿಸಿಕೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ."

5. ಉಲ್ಲೇಖ (1) ರ ದಿನಾಂಕ: 08.03.1991ರ ಸುತ್ತೋಲೆ ಮತ್ತು ಉಲ್ಲೇಖ (3) ರ ದಿನಾಂಕ 28.06.2021 ರ ಅಧಿಕೃತ ಜ್ಞಾಪನ, ಇವುಗಳನ್ನು ಉಲ್ಲೇಖಿಸಿ, ಮೇಲ್ಕಂಡ ಸ್ವಾಯತ್ತ ಸಂಸ್ಥೆಗಳಿಗೆ ಸದರಿ ಮೀಸಲಾತಿ ಆದೇಶಗಳನ್ನು ಅನ್ವಯಿಸುವ ಬಗ್ಗೆ ವಿವಿಧ ಇಲಾಖೆಗಳು ಸ್ಪಷ್ಟೀಕರಣಗಳನ್ನು ಕೋರಿರುತ್ತವೆ.

6. ಮೇಲ್ಕಂಡ ಹಿನ್ನೆಲೆಯಲ್ಲಿ, ಉಲ್ಲೇಖಿತ ಸುತ್ತೋಲೆ / ಅಧಿಕೃತ ಜ್ಞಾಪನಗಳಲ್ಲಿ ನೀಡಿರುವ ಸೂಚನೆಗಳನ್ನು ಪುನರುಚ್ಚರಿಸುತ್ತಾ, ಈ ಕೆಳಕಂಡಂತೆ ಮುಂದುವರಿದ ಸೂಚನೆಗಳನ್ನು ಈ ಮೂಲಕ ನೀಡಲಾಗಿದೆ:

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



1. **ಮೊದಲನೆಯದಾಗಿ,** 1990 ರ ಸದರಿ ಅಧಿನಿಯಮದ, ಮೇಲೆ ಉದ್ಧರಿಸಲಾದ ಸೆಕ್ಷನ್ 2 ರ ಉಪ ಸೆಕ್ಷನ್ (3) ರಲ್ಲಿ "establishments in public sector" ಎಂಬುದನ್ನು ಪರಿಭಾಷಿಸಲಾಗಿದ್ದು, ಅದರಲ್ಲಿ ನಮೂದಿಸಲಾದ ಸ್ವಾಯತ್ತ ಸಂಸ್ಥೆಗಳಿಗೆ ಸಂವಿಧಾನದ ಅನುಚ್ಛೇದ 16 (4) ಮತ್ತು 16 (4A) ರಡಿ ಸರ್ಕಾರದ ಮೀಸಲಾತಿ ಆದೇಶಗಳು ಅನ್ವಯವಾಗುತ್ತವೆ ಹಾಗೂ ಆ ಸ್ವಾಯತ್ತ ಸಂಸ್ಥೆಗಳು ಮೀಸಲಾತಿ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದೆಂದು ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ. ಮೀಸಲಾತಿ ಆದೇಶಗಳನ್ನು ಪಾಲಿಸುವ ಹೊಣೆಯು ಆಯಾಯ ನೇಮಕಾತಿ ಪ್ರಾಧಿಕಾರದ್ದಾಗಿರುತ್ತದೆ. ಆದರೂ, ಮೀಸಲಾತಿ ಆದೇಶಗಳ ಕುರಿತು ಸ್ವಾಯತ್ತ ಸಂಸ್ಥೆಗಳಿಗೆ ಯಾವುದೇ ನಿರ್ಧಿಷ್ಟ ಅಂಶದ ಬಗ್ಗೆ ಅನುಮಾನ ಇದ್ದಲ್ಲಿ, ಆ ಅಂಶವನ್ನು ಸ್ಪಷ್ಟವಾಗಿ ನಮೂದಿಸಿ, ಸಂಬಂಧಿಸಿದ ಆಡಳಿತ ಇಲಾಖೆಗಳ ಮೂಲಕ ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ (ಸೇವಾ ನಿಯಮಗಳು) ಯೊಂದಿಗೆ ಸಮಾಲೋಚಿಸಬಹುದಾಗಿದೆ.
2. **ಎರಡನೆಯದಾಗಿ,** ಸ್ವಾಯತ್ತ ಸಂಸ್ಥೆಗಳು ವೃಂದ ಮತ್ತು ನೇಮಕಾತಿ ನಿಯಮಗಳನ್ನು (Cadre and Recruitment Rules) ರಚಿಸುವ ಸಂದರ್ಭದಲ್ಲಿ ಆಯಾಯ ಸಂಸ್ಥೆಯ ಅಗತ್ಯತೆಗಳು, ಅದರ ಆರ್ಥಿಕ ಪರಿಸ್ಥಿತಿ (financial capacity) ಹಾಗೂ ಸಂಪನ್ಮೂಲದ ಮಿತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವೃಂದ ಬಲ, ವೇತನ ಶ್ರೇಣಿ, ಭತ್ಯೆ ಇತ್ಯಾದಿಗಳನ್ನು ಮತ್ತು ಇತರ ಸೇವಾ ಷರತ್ತುಗಳನ್ನು ನಿಗದಿಪಡಿಸುವುದು.

3. **ಮೂರನೆಯದಾಗಿ,** ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಸ್ವಾಯತ್ತ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ. ಸ್ವಾಯತ್ತ ಸಂಸ್ಥೆಗಳು ಅವುಗಳ ಆರ್ಥಿಕ ಪರಿಸ್ಥಿತಿ (financial capacity) ಹಾಗೂ ಸಂಪನ್ಮೂಲದ ಮಿತಿಗಳನ್ನು ದೃಷ್ಠಿಯಲ್ಲಿಟ್ಟುಕೊಂಡು 1996 ರ ಸದರಿ ನಿಯಮಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಸಾಧಕ ಬಾಧಕಗಳನ್ನು ಪರಿಶೀಲಿಸಿ ನಿರ್ಧರಿಸಬಹುದು.

7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿರವರು ಮೇಲ್ಕಂಡ ಸೂಚನೆಗಳನ್ನು ಅವರವರ ಆಡಳಿತ ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳಿಗೆ ತಿಳಿಸುವಂತೆ ಕೋರಿದೆ.

(ಆಶಾಕುಮಾರಿ. ಎ.ಜೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH